**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 26.03.2026:**

**ಪಾಟೀಸವಾಲುಃ**

ನಾನು 2 ಹಿಯರಿಂಗ್ ದಿನಾಂಕದಂದು ಸಲ್ಲಿಸಿದ ಪ್ರಮಾಣಪತ್ರದಲ್ಲಿನ ವಿಚಾರಗಳು ಒಂದೇ ಎಂದರೆ ಸರಿ. ಮೊದಲ ಬಾರಿ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಘಟನೆ ನಡೆದ ದಿನಾಂಕ 23-3-18 ಎಂದು ಎರಡನೇ ಬಾರಿ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಘಟನಾ ದಿನಾಂಕ 23-3-15 ಎಂದು ಕಾಣಿಸಿದ್ದೇನೆ ಎಂದರೆ ಸಾಕ್ಷಿಯು ಹೌದು,ದಿನಾಂಕ 23-3-15 ಎಂದು 2ನೇ ಪ್ರಮಾಣಪತ್ರದಲ್ಲಿ ತಪ್ಪಾಗಿ ಬೆರಳಚ್ಚಾಗಿದೆ ಎನ್ನುತ್ತಾರೆ.

2.ಸಂಸ್ಥೆ ನಿಯಮದ ಪ್ರಕಾರ ಕರ್ತವ್ಯದಲ್ಲಿರುವಾಗ ನಾವು ನಮ್ಮ ಸ್ವಂತ ಹಣವನ್ನು ಉಳಿಸಿಕೊಳ್ಳುವಹಾಗಿಲ್ಲ, ಉಳಿಸಿಕೊಳ್ಳುವುದಿದ್ದರೆ ಮೇಲಧಿಕಾರಿಗಳ ಅನುಮತಿ ಪಡೆಯಬೇಕು. 200ರೂ ವರೆಗೆ ಉಳಿಸಿಕೊಳ್ಳಬೇಕಾದರೆ ವೇಬಿಲ್ ನಲ್ಲಿ ನಮೂದಿಸಬೇಕು ಅದಕ್ಕಿಂತ ಹೆಚ್ಚು ಹಣ ಉಳಿಸಿಕೊಳ್ಳಲು ಮೇಲಧಿಕಾರಿಗಳಿಂದ ಬರೆಸಿಕೊಳ್ಳಬೇಕು. ತನಿಖಾಧಿಕಾರಿಗಳು ನನ್ನನ್ನು ಮೂಡಿಗೆರೆಯಲ್ಲಿ ಕರ್ತವ್ಯದಲ್ಲಿರುವಾಗ ಹಿಡಿದಿರುವುದು ಎಂದರೆ ಸರಿ. 23-3-18ರಂದು ನಾನು ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ 1946ರಲ್ಲಿ ಚಾಲಕನಾಗಿದ್ದೆ ಎಂದರೆ ಸರಿ. ಆ ದಿವಸ ನಾನು ರಾಮನಾಥಪುರದಿಂದ ಮೂಡಿಗೆರೆಗೆ ವಾಹನ ಚಲಾಯಿಸಿಕೊಂಡು ಹೋಗುತ್ತಿದ್ದೆ ಎಂದರೆ ಸರಿ.

ಮೂಡಿಗೆರೆ ಬಸ್ ನಿಲ್ದಾಣ ತಲುಪಿದ ನಂತರ ಮೇಲಧಿಕಾರಿಗಳು ನನ್ನನ್ನು ಹಿಡಿದಿರುವುದೆಂದರೆ ಸರಿ. ಆಗ ನನ್ನನ್ನು ಹಿಡಿದಾಗ ನನ್ನ ಬಳಿ 5020ರೂ ಹಣ ಇತ್ತು ಎಂದರೆ ಸಾಕ್ಷಿಯು ನನ್ನ ಬಳಿ ಇರಲಿಲ್ಲ, ಚಾಲಕನ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ವ್ಯಕ್ತಿ ಬಸ್ಸಿನಿಂದ ಇಳಿದು ಹೋದ ನಂತರ ನನ್ನಲ್ಲಿಗೆ ಬಂದು ಆ ಸೀಟಿನಲ್ಲಿ ಕವರ್ ಬಿದ್ದಿದೆ ಎಂದು ಅದನ್ನು ತೆಗೆದುಕೊಡಬೇಕೆಂದು ಹೇಳಿದರು, ಆಗ ಅದನ್ನು ತೆಗೆದುಕೊಡುವಾಗ ನನ್ನನು ಬಂದು ಹಿಡಿದದ್ದು ಎನ್ನುತ್ತಾರೆ. ನಮ್ಮ ಸಂಸ್ಥೆಯ ಸಿ ಅಂಡ್ ಡಿ ರೂಲ್ಸ್‌ನ್ನು ತಿಳಿದುಕೊಂಡಿರುತ್ತೇನೆ. ಕಾಲಕಾಲಕ್ಕೆ ಇಲಾಖೆ ಹೊರಡಿಸುವ ಸುತ್ತೋಲೆಗಳನ್ನು ನಾನು ತಿಳಿದುಕೊಂಡಿಲ್ಲ.

3.ದಿನಾಂಕ 7-8-14 ರಂದು ಇಲಾಖೆಯು ಸ್ಥಾಯಿ ಆದೇಶದಂತೆ 758/14ರ ಬಗ್ಗೆ ನನಗೆ ಗೊತ್ತಿಲ್ಲ. ಅದರ ಪ್ರಕಾರ ನಾನು ಗಂಭೀರ ಸ್ವರೂಪದ ತಪ್ಪನ್ನೆಸಗಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ವಿಚಾರಣೆಯಲ್ಲಿ ನಾನು ಉತ್ತರ ನೀಡಿಲ್ಲ. ಆ ದಿವಸ ನನ್ನ ಬಳಿ ಅಲ್ಲಿದ್ದ ಹಣ ಕೇಳಲು ಬಂದ ವ್ಯಕ್ತಿಯ ಹೆಸರೇನೆಂದು ನನಗೆ ಗೊತ್ತಿಲ್ಲ. ತನಿಖಾಧಿಕಾರಿಗಳು ಲಾಗ್ ಶೀಟ್ ನಲ್ಲಿ ನನ್ನ ಬಳಿ ಹೆಚ್ಚುವರಿ ಹಣ ಇದ್ದ ಬಗ್ಗೆ ನಮೂದು ಮಾಡಿದ ಬಗ್ಗೆ ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ನಾನೇನೂ ಹೇಳಲಿಲ್ಲ ಮತ್ತು ಅದು ನನ್ನ ಹಣವಲ್ಲವೆಂದು ಹೇಳಿರುತ್ತೇನೆ ಎನ್ನುತ್ತಾರೆ. ತನಿಖಾಧಿಕಾರಿಗಳು ಒತ್ತಾಯವಾಗಿ ಆ ಹಣ ನನ್ನದೆ ಎಂದು ಆಪಾದನೆ ಮಾಡಿರುತ್ತಾರೆನ್ನುವ ಬಗ್ಗೆ ನಾನು ಮೇಲಧಿಕಾರಿಗಳಿಗೆ ದೂರುನೀಡಿರುತ್ತೇನೆ. ನಾನು ಯಾವುದೇ ದೂರು ನೀಡಿಲ್ಲಎಂದರೆ ಸರಿಯಲ್ಲ. ನನ್ನ ಜೇಬಿನಲ್ಲಿ 5020ರೂ ಇತ್ತು ಆದ್ದರಿಂದಲೇ ನಾನು ಯಾವುದೇ ದೂರು ನೀಡಿಲ್ಲ ಎಂದರೆ ಸರಿಯಲ್ಲ.

4.ನ್ಯಾಯಾಲಯದಿಂದ ಹಣ ಬಿಡುಗಡೆಗೊಳಿಸಿಕೊಂಡು ಹೋದ ವ್ಯಕ್ತಿ ಮಹೇಶ್ ರವರನ್ನು ನನ್ನ ಪರ ಸಾಕ್ಷಿಯನ್ನಾಗಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನೋಡಿ ಹೇಳುತ್ತೇನೆ ಎನ್ನುತ್ತಾರೆ. ನನ್ನ ಪ್ರಮಾಣಪತ್ರದಲ್ಲಿ ನಾನು ತನಿಖಾಧಿಕಾರಿಗಳು ದುರುದ್ದೇಶದಿಂದ ಸುಳ್ಳು ಕೇಸುಹಾಕಿರುತ್ತಾರೆಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನನ್ನು ಕೆಲಸದಿಂದ ತೆಗೆದುಹಾಕಿದ ನಂತರ ಅಂದಿನಿಂದ ಇಂದಿನವರೆಗೆ ಬೇರೆ ಕಡೆ ಕೆಲಸ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು

ಸಂಸ್ಥೆಯ ನಿಯಮಕ್ಕೆ ವಿರುದ್ಧವಾಗಿ ನಡೆದುಕೊಂಡು ತಪ್ಪು ಮಾಡಿದ್ದರಿಂದ ಯಾವುದೇ ಪರಿಹಾರ ಹೊಂದಲು ಸಮರ್ಥನಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**